# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಗರುಡ ಪ್ರತಾಪ

ಕವಿ


## ಶ್ರೀಧರ ಡಿ. ಎಸ್.



ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ಜುಲೈ ೩೦, ೨೦೧೯

ಯಕ್ಷವಾಹಿನಿ®

Email: yakshaprasangakosha@co.gmailm, yakshavahini@co.gmailm Blog: www.yakshaprasangakosha.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ  ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ  ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಮಹಾಭಾರತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಉಡುಪಿ ಯಕ್ಷಗಾನ ಕೇಂದ್ರ ಪ್ರಕಟಿತ ಯಕ್ಷಗಾನ ಪ್ರಸಂಗ ಮಾಲಿಕಾ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೯೪

**ಪಾತ್ರಗಳು:**

ಇಂದ್ರ, ದಿಕ್ಪಾಲಕರು, ಬ್ರಹ್ಮ, ಕದ್ರು, ವಿನತೆ, ನಾಗಕುಮಾರರು, ಗರುಡ, ಕಶ್ಯಪಮಹರ್ಷಿ, ದೇವದೂತ, ಯಕ್ಷರು, ಮಹಾವಿಷ್ಣು

**ಕಥಾ ಸಾರಾಂಶ:**

`ಗರುಡ ಪ್ರತಾಪ' ಮಹಾಭಾರತದ ಆದಿಪರ್ವದಲ್ಲಿ ಬರುವ ಸೊಗಸಾದ ಕಥೆ. ಜನಮೇಜಯನ ಸರ್ಪಯಾಗದಲ್ಲಿ ಸರ್ಪಗಳೆಲ್ಲಾ ಮರಣಹೊಂದಲಿ ಎಂದು ಕದ್ರು ಶಾಪವೀಯುವ, ವಿನತೆಯು ದಾಸಿಯಾಗಿ ಕಷ್ಟಪಡುವ, ವೈನತೇಯನಿಂದ ದಾಸ್ಯವಿಮೋಚನೆಗಾಗಿ ಅಮೃತಹರಣವಾಗುವ ಪ್ರಸಂಗಗಳು ಈ ಕಥೆಯಲ್ಲಿ ಬರುತ್ತವೆ. ಗರುಡದೇವನ ಅದ್ಭುತ ಶಕ್ತಿಪ್ರದರ್ಶನ, ವಿಷ್ಣುವಾಹನನಾದುದು ಇಲ್ಲಿಯ ರೋಚಕಭಾಗ. 'ರಂಗದ ಪರಿಕಲ್ಪನೆ'ಯನ್ನಿಟ್ಟು 'ಯಕ್ಷ'ರು ಗರುಡನೊಂದಿಗೆ ಯುದ್ಧಮಾಡುವ ಭಾಗವನ್ನು ಸಂಯೋಜಿಸಿಕೊಳ್ಳಲಾಗಿದೆ. 'ಸಮುದ್ರಮಥನ'ದಷ್ಟು ಹಿಂದಿನ ಕಥೆಯಲ್ಲಿ ಮಹಾಭಾರತದ ಬೀಜ (ಜನಮೇಜಯನ ಸರ್ಪಯಾಗದ ಪ್ರಸ್ತಾಪ) ಅಂಕುರವಾದುದನ್ನೂ ಪುರಾಣ ಕುತೂಹಲಿಗಳು ಗಮನಿಸಬಹುದು.

**ಕವಿ ಪರಿಚಯ:**

ನಿವೃತ್ತ ಕನ್ನಡ ಉಪನ್ಯಾಸಕ. ಸಾಹಿತಿ, ಯಕ್ಷಗಾನ ಅರ್ಥಧಾರಿ ಮತ್ತು ಪ್ರಸಂಗ ಕರ್ತೃ. ಯಕ್ಷಗಾನ ವಿಮರ್ಶಕ. ಊರು-ಶಿವಮೊಗ್ಗ ಜಿಲ್ಲೆಯ ನಿವೃತ್ತ ಕನ್ನಡ ಉಪನ್ಯಾಸಕ. ಸಾಹಿತಿ, ಯಕ್ಷಗಾನ ಅರ್ಥಧಾರಿ ಮತ್ತು ಪ್ರಸಂಗ ಕರ್ತೃ. ಯಕ್ಷಗಾನ ವಿಮರ್ಶಕ. ಊರು-ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕು, ನಿಟ್ಟೂರು ಬಳಿಯ ಧರೇಮನೆ. ಕಳೆದ ಮೂವತ್ತಾರು ವರ್ಷಗಳಿಂದ ನೆಲೆಸಿರುವುದು ಮಂಗಳೂರು ತಾಲೂಕಿನ ಕಿನ್ನಿಗೋಳಿಯಲ್ಲಿ. ವಿದ್ಯಾರ್ಥಿ ದೆಸೆಯಿಂದಲೇ ಯಕ್ಷಗಾನದಿಂದ ಆಕರ್ಷಿತ. ವೇಷಧಾರಿಯಾಗಿ, ಅರ್ಥಧಾರಿಯಾಗಿ ಪಳಗಲು ವಿದ್ಯಾಭ್ಯಾಸ ಮಾಡಿದ ಉಡುಪಿ ಸಹಕಾರಿಯಾಯಿತು.

ಸುಮಾರು ಮೂವತ್ತೊಂದು ಯಕ್ಷಗಾನ ಪ್ರಸಂಗಗಳ ರಚಯಿತ. ಉಡುಪಿ ಯಕ್ಷಗಾನ ಕೇಂದ್ರ ಯಕ್ಷಗಾನ ಪ್ರಸಂಗ ಮಾಲಿಕಾ ಎಂಬ ಶೀರ್ಷಿಕೆಯಲ್ಲಿ ೧೩ ಪ್ರಸಂಗಗಳನ್ನು ಒಂದೇ ಕೃತಿಯಲ್ಲಿ ಪ್ರಕಟಿಸಿದೆ. ಯಕ್ಷಗಾನದ ಸುಮಾರು ನೂರಾಮೂವತ್ತು ಮಟ್ಟುಗಳನ್ನು ವಿವಿಧ ಪ್ರಸಂಗಗಳಲ್ಲಿ ಬಳಸಿಕೊಳ್ಳಲಾಗಿದೆ. ಪ್ರಸಂಗ ರಚನೆ ಮಾತ್ರವಲ್ಲದೆ, ಯಕ್ಷಗಾನ ಕ್ಷೇತ್ರಕ್ಕೆ ಸಂಬಂಧಿಸಿದ ನೂರಾರು ವಿಮರ್ಶೆಗಳು, ಚಿಂತನೆಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ, ಗ್ರಂಥಗಳಲ್ಲಿ ಪ್ರಕಟಗೊಂಡಿವೆ. ಕಿನ್ನಿಗೋಳಿಯ `ಯಕ್ಷಲಹರಿ' ಯಕ್ಷಗಾನ ಸಂಸ್ಥೆಯಲ್ಲಿ ೨೪ ವರ್ಷ ಕಾರ್ಯದರ್ಶಿಯಾಗಿ ಸೇವೆ. ಹಲವು ತಾಳಮದ್ದಲೆ ಸ್ಪರ್ಧೆಗಳನ್ನು, ಸಪ್ತಾಹಗಳನ್ನು ಆಯೋಜಿಸಿದ್ದಾರೆ. ಜೊತೆಗೆ, ವಿವಿಧ ಸಂಘ ಸಂಸ್ಥೆಗಳು ಆಯೋಜಿಸಿರುವ ಆಟ-ಕೂಟಗಳಲ್ಲಿ ಅವಲೋಕನಕಾರರಾಗಿ ಮತ್ತು ಗೋಷ್ಠಿ, ಕಮ್ಮಟಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡ ಅನುಭವ. ಅರ್ಥಧಾರಿಯಾಗಿ ಸಾವಿರಾರು ಕೂಟಗಳಲ್ಲಿ ಭಾಗವಹಿಸುವಿಕೆ. ಎಲ್ಲ ಬಗೆಯ ಪಾತ್ರಗಳ ನಿರ್ವಹಣೆ. ಅವಧಾನಗಳಲ್ಲಿ ಪೃಚ್ಛಕರಾಗಿ, ಸಂಘ-ಸಂಸ್ಥೆಗಳ ಸಲಹೆಗಾರರಾಗಿ, ಶ್ರೀ ಗುರು ರಾಘವೇಂದ್ರ ಸಂಚಾರಿ ಯಕ್ಷಗಾನ ಮಂಡಳಿ ಹೊಸಬೆಟ್ಟು ಸುರತ್ಕಲ್ ಇದರ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಣೆ. ಸಾಹಿತ್ಯದ ಇತರ ಪ್ರಕಾರಗಳಲ್ಲೂ ಆಸಕ್ತಿ. ರಾಜಕೀಯ ವಿಶ್ಲೇಷಣೆ, ರಂಗ ವಿಮರ್ಶೆ, ಲಲಿತ ಪ್ರಬಂಧ, ನಗೆ ಲೇಖನಗಳನ್ನು ಬರೆಯುವುದೂ ಹವ್ಯಾಸ. ಹಾಸ್ಯ ಬರಹ ಕುರಿತ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಬಹುಮಾನವೂ ಬಂದಿದೆ. 'ಬಸ್ಸು ಜಟಕಾ ಬಂಡಿ' ಎಂಬ ನಗೆ ಲೇಖನಗಳ ಪುಸ್ತಕ ಪ್ರಕಟಗೊಂಡಿದೆ. ಶ್ರೀರಾಮಚಂದ್ರಾಪುರ ಮಠದಿಂದ ಪ್ರಕಟಗೊಂಡ ಗುರುಗ್ರಂಥಮಾಲಿಕೆಯಲ್ಲಿ ಶುಕ್ರಾಚಾರ್ಯ, ದ್ರೋಣಾಚಾರ್ಯ, ಮಹಾಮುನಿ ಶುಕ ಎಂಬ ಮೂರು ಕೃತಿಗಳು ಪ್ರಕಟವಾಗಿವೆ. ಮಂಗಳೂರು ವಿಶ್ವವಿದ್ಯಾನಿಲಯದ ದ್ವಿತೀಯ ಬಿ. ಕಾಂ ಪದವಿ ಕನ್ನಡ ಪಠ್ಯಪುಸ್ತಕದಲ್ಲಿ `ಮಹಾಪ್ರಸ್ಥಾನ' ಪ್ರಸಂಗದ ಪಾಂಡವ ಸ್ವರ್ಗಾರೋಹಣದ ಒಂದು ಭಾಗ ಪಠ್ಯವಾಗಿದೆ.

ಯಕ್ಷಗಾನ ಪತ್ರಿಕೆ `ಕಣಿಪುರ'ದಲ್ಲಿ ರಂಗಸ್ಥಳದ ಅಭಿಜಾತ ಕವಿಗಳು ಎಂಬ ಅಂಕಣವನ್ನು ಬರೆಯುತ್ತಿದ್ದು, ಇದರಲ್ಲಿ ಯಕ್ಷಗಾನ ಸುಪ್ರಸಿದ್ಧ ಕವಿಗಳ ಪರಿಚಯ ನೀಡಲಾಗುತ್ತಿದೆ. ಬೆಂಗಳೂರಿನ `ಸುದಿನ ಸುರಭಿ' ಪತ್ರಿಕೆಯಲ್ಲಿ `ಪುರಾಣ ಸ್ವಾರಸ್ಯಗಳು' ಎಂಬ ಅಂಕಣ ಬರಹ ಪ್ರಕಟಗೊಂಡಿದೆ. ಶ್ರೀ ರಾಮಚಂದ್ರಾಪುರ ಮಠದ `ಧರ್ಮಭಾರತೀ' ಮಾಸಪತ್ರಿಕೆಯಲ್ಲಿ `ವೀರತಪಸ್ವಿ' ಧಾರಾವಾಹಿಯಾಗಿ ಪ್ರಕಟವಾಗುತ್ತಿದೆ.

ಉಡುಪಿಯ ಯಕ್ಷಗಾನ ಕಲಾರಂಗ ಸಂಸ್ಥೆ ೨೦೧೫ನೇ ಸಾಲಿನ `ತಲ್ಲೂರು ಕನಕ ಅಣ್ಣಯ್ಯ' ಪ್ರಶಸ್ತಿ ನೀಡಿ ಗೌರವಿಸಿದೆ. ಜೊತೆಗೆ ಅವರ ಪ್ರಸಂಗಗಳ ಕುರಿತ ಸಾಹಿತ್ಯ-ಸಾಧನಾವಲೋಕನ, ಅವರ ಯಕ್ಷಗಾನ ಪ್ರಸಂಗಗಳ ವಸ್ತುವಿನ್ಯಾಸ-ಆಶಯ, ಛಂದಸ್ಸಿನ ಬಳಕೆ ಕುರಿತಾಗಿ ಯಕ್ಷ ವಿದ್ವತ್ ಲೋಕ ಭಾಷಣ-ಚರ್ಚೆಗಳನ್ನು ದಿನವಿಡೀ ನಡೆಸಿದ್ದು ಗಮನಾರ್ಹ. ಯಕ್ಷಗಾನ ಬಯಲಾಟ ಅಕಾಡೆಮಿ ಶ್ರೀಧರರ `ಯಕ್ಷಗಾನ ಪ್ರಸಂಗ ಮಾಲಿಕಾ' ಕೃತಿಗೆ ೨೦೧೧ನೇ ಸಾಲಿನ ಪುಸ್ತಕ ಪ್ರಶಸ್ತಿ ನೀಡಿ ಗೌರವಿಸಿದೆ. ಶಿವಮೊಗ್ಗದಲ್ಲಿ ೨೦೧೬ರ ಜನವರಿಯಲ್ಲಿ ನಡೆದ ಅಖಿಲ ಭಾರತ ೧೧ನೇ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ೨೦೧೬ರ ಫೆಬ್ರವರಿ ತಿಂಗಳಲ್ಲಿ ಕೆರೆಮನೆಯಲ್ಲಿ ನಡೆದ `ಶಂಭುಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ' ಕಾರ್ಯಕ್ರಮದಲ್ಲಿ ಸನ್ಮಾನಿಸಲ್ಪಟ್ಟಿದ್ದಾರೆ. `ಜಡಭರತ' ಎಂಬ ಪೌರಾಣಿಕ ಕಾದಂಬರಿ ಪ್ರಕಟಗೊಂಡಿದ್ದು, `ಅಸುರ ಗುರು' ಎಂಬ ಬೃಹತ್ ಕಾದಂಬರಿ ಪ್ರಕಟಣೆಗೆ ಸಿದ್ಧವಾಗಿದೆ.

ಇವರು ಬರೆದ ಪ್ರಸಂಗಗಳು: ಕಬಂಧ ಮೋಕ್ಷ, ಸುದ್ಯುಮ್ನ, ಆದಿನಾರಾಯಣ ದರ್ಶನ, ಕುವಲಯಾಶ್ವ, ಗರುಡ ಪ್ರತಾಪ, ಬಾಲಭಾರತ, ಸತ್ವಶೈಥಿಲ್ಯ, ಮಹಾಪ್ರಸ್ಥಾನ, ಪರೀಕ್ಷಿತ-ಆಸ್ತೀಕಜನ್ಮ, ಜನಮೇಜಯ, ಶುಕ್ರಸಂಜೀವಿನೀ, ಅಗಸ್ತ್ಯ, ಜಡಭರತ, ಸಮ್ರಾಟ್ ಮರುತ್ತ, ಕುಜ್ರಂಭ ಕಂದರ, ಯಕ್ಷಪ್ರಶ್ನೆ, ಯೋಗಾವತಾರಂ, ಫಲ್ಗುಣೀ ತೀರ್ಥ ಮಹಿಮೆ, ವೀರ ಚಿತ್ರಧ್ವಜ, ಶ್ರೀರಂಗ ರಾಯಭಾರ, ನಾಲಾಯನೀ, ಬಕನ ಬಂಡಿ, ಅಂಗಾರಪರ್ಣ ವೃತ್ತಾಂತ, ಧೌಮ್ಯಪರಿಗ್ರಹ, ದ್ರೌಪದೀ ಸ್ವಯಂವರ, ದುರ್ಗಮಾಸುರ ವಧೆ, ಶರವೂರ ಶ್ರೀದುರ್ಗೆ, ಪೃಥುಯಜ್ಞ, ಹನ್ನಾರ ರಾಮೇಶ್ವರ ಮಹಾತ್ಮೆ, ನೈಮಿಷಾರಣ್ಯ ನಿರ್ಮಾಣ, ಸ್ವರ್ಣಕಮಲ

**ಟಿಪ್ಪಣಿ:**

ಪುರಾಣ ಪ್ರಸಿದ್ಧವಾದ ಗರುಡನು ವಿಷ್ಣುವಾಹನನಾಗುವ ಕಥೆ ಗರುಡ ಪ್ರತಾಪ. ಸಮುದ್ರ ಮಥನದ ನಂತರ ಉಚ್ಚೈಶ್ರವಸ್ ಸ್ವರ್ಗಕ್ಕೆ ಬರುವಲ್ಲಿಂದ ತೊಡಗಿ ಗರುಡ ನಾಗಗಳಿಗೆ ಮಾತೃ ಶಾಪ, ವಿನತೆಯ ದಾಸ್ಯ, ಗರುಡೋದ್ಭವ, ಗರುಡನ ಮಹಾಸಾಹಸ, ಅಮೃತ ಹರಣ, ಗರುಡ ವಾಹನ ಹೀಗೆ ಸ್ವಾರಸ್ಯವಾದ ಕಥಾಗುಚ್ಛವನ್ನು ಸಂಗ್ರಹಿಸಿ ರಚಿಸಿದ, ಕಾಲಮಿತಿ ಪ್ರಯೋಗಕ್ಕೆ (ಮೂರು ಗಂಟೆ) ಚೆನ್ನಾಗಿ ಹೊಂದುವ ಕೃತಿ. ಮಕ್ಕಳ ಯಕ್ಷಗಾನ ಪ್ರಯೋಗದಲ್ಲಿ ಯಶಸ್ವಿಯಾದ ಪ್ರಸಂಗ. ತಾಳಮದ್ದಲೆಗೂ ಚೆನ್ನಾಗಿ ಹೊಂದುತ್ತದೆ. ಯಶಸ್ವಿಯೂ ಆಗಿದೆ.  ವೈವಿಧ್ಯಮಯ ಪದ್ಯಗಳು, ಯಕ್ಷಗಾನಕ್ಕೆ ವಿಶಿಷ್ಟವಾದ ಯಕ್ಷರ ಯುದ್ಧ, ಗರುಡನ ಆರ್ಭಟ, ಮಹಾವಿಷ್ಣುವಿನ ತಂತ್ರಗಾರಿಕೆ, ನಾಗಗಳ ತೊಳಲಾಟ ಹೀಗೆ ಸ್ವಾರಸ್ಯಕರ ಸನ್ನಿವೇಶಗಳೊಂದಿಗೆ ಸೊಗಸಾಗಿದೆ ಗರುಡ ಪ್ರತಾಪ ಪ್ರಸಂಗ.

# ಪ್ರಸಂಗ ಸಾಹಿತ್ಯ

**ನಾಂದಿ:**
**ಕುಸುಮ ಷಟ್ಪದಿ**
ಗಣಪತಿಗೆ ಶಾರದೆಗೆ |
ಪರಮೇಷ್ಠಿ ಹರಿಲಕ್ಷ್ಮಿ |
ಹರಗಿರಿಜೆ ಗೀರ್ವಾಣಗಣಕೆ ಬಾಗಿ ||
ಸರಸಕವಿಗಳಿಗೆರಗಿ |
ಒರೆವೆ ಹಿರಿಯರು ಹರಸು |
ತಿರೆ ಯಕ್ಷಗಾನಪ್ರಸಂಗವಾಗಿ || 1 ||

**ಕಂದ**
ಸುತನೆಂ ಶ್ರೀಪಾದ ಸರ |
ಸ್ವತಿಯರ್ಗೆ ಧರೆಮನೆಯೂರು ಶ್ರೀಧರ, ಕಲೆಯಂ |
ಸತತಂ ಕಾವ ಕಟೀಲೊಳು |
ಸ್ಥಿತಳಾದಂಬಿಕೆಗೆ ಬಾಗಿ ಕೃತಿಯೊಪ್ಪಿಸುವೆಂ || 1 || 2 ||

***ಇಂದ್ರನ ಓಲಗ:***
**ಸೌರಾಷ್ಟ್ರ - ತ್ರಿವುಡೆ**
ಸುರಪ ಸಂಭ್ರಮದಿಂ ಸುಧರ್ಮದಿ |
ವಿರಚಿಸಿದನೋಲಗವ ದಿಕ್ಪಾ |
ಲರು ಬೃಹಸ್ಪತಿಮುಖ್ಯ ಬರ್ದಿಲ | ನೆರವಿಗೂಡಿ || 1 ||
ನೋಡಿದನು ದಿಕ್ಪಾಲಪ್ರಮುಖರೊ |
ಳಾಡಿದನು ಪಾಲ್ಗಡಲ ಕಡೆಯೆ ನಿ |
ಗೂಢವಮೃತವ ಪಡೆಯೆ ಭಾಗ್ಯವು | ಮೂಡಿತೆಮಗೆ || 2 ||
ತುರಗವುಚ್ಚೈಃಶ್ರವವು ಸಂಭ್ರಮ |
ವೆರಸಿ ಬರುವುದ ಸ್ವಾಗತಿಸೆ ನಾವ್ |
ಪೊರಡಬೇಕೀಗೆನಲು ಪೊಳೆದುದು | ಪರಮತೇಜ || 3 || 5 ||

**ಕಾಂಬೋಧಿ - ಝಂಪೆ**
ಬಿಸಜಪೀಠನ ದಿವ್ಯ ತೇಜದಾವರಣ ಸುಮ |
ನಸನಗರಮಂ ಬೆಳಗೆ 'ಓಂ'ಕಾರ ಮೊಳಗೆ |
ಧಿಷಣಾದಿ ವಿದ್ವತ್ಪ್ರಭಾವಲಯವೇಳುತಿರ |
ಲೊಸಗೆಯಲಿ ಕರೆತಂದ ಸುರಪಾಲ ಸಭೆಗೆ || 1 ||
ಪೂತರಾದೆವು ಪದ್ಮಜಾತ ನಿಮ್ಮಾಗಮನ |
ರೀತಿ ಬಹು ಪೊಸತಾಯ್ತು ಧನ್ಯವೀ ನಾಕ ||
ಐತಂದ ಹದನೇನು ಮಾತೆಮಗೆ ಕಟ್ಟಾಜ್ಞೆ |
ಜಾತರಿಂಗೀಯಬೇಕೆಂದ ಪುರುಹೂತ || 2 || 7 ||

**ಕಾಪಿ - ಅಷ್ಟ**
ಶರಧಿಯ ಮಥಿಸೆ ನೀವೆಲ್ಲ | ಕರಿ |
ತುರಗವಮೃತಧೇನು ಕುಜ ಸಿಕ್ಕಿತಲ್ಲ ||
ಸುರರೈಸಿರಿಯ ನೋಳ್ಪ ಮನದಿ | ಬಂದೆ |
ಸರುವಸಂಭ್ರಮವ ನಾನೀಕ್ಷಿಪೆ ಮುದದಿ || 1 ||
ಮಾಧವನೊಲುಮೆಯಿಂದಾವು | ಕ್ಷೀ |
ರೋದವ ಮಥಿಸಿ ಸಂಪದವ ಪೊಂದಿದೆವು ||
ಈ ದಿನ ಬಹುದುಚ್ಚೈಃಶ್ರವವು | ದಿವ್ಯ |
ವಾದೀ ವಾಜಿಯನೆದುರ್ಗೊಳಲು ಪೋಗುವೆವು || 2 || 9 ||

**ವಾರ್ಧಕ**
ಪರಮೇಷ್ಠಿ ಸುರಪ ಸುರರೆಲ್ಲರುಚ್ಚೈಃಶ್ರವದ |
ಬರವನೀಕ್ಷಿಸುತಿರಲ್ಕಿತ್ತ ಕಶ್ಯಪನರಸಿ |
ಉರಗಮಾತೆಯು ಕದ್ರು ವಿನತೆ ಸವತಿಯರಿರಲ್ ಸರಿಸಾಟಿಯಾಗಿ ಸತತ ||
ಅರುಣಮಾತೆಯು ವಿನತೆ ಸವತಿಯಾಗಿಹಳೆನಗೆ |
ಚಿರಕಾಲ ದಾಸ್ಯಕಾಂ ಪಡೆದೆನಾದರೆ ಮುಂದೆ |
ಭರಿತಮಪ್ಪುದು ಭಾಗ್ಯ ಸುತರಿಗೆನಗೆನುತಿರಲ್ ವಿನತೆಯೈತರುತೆಂದಳು || 1 || 10 ||

**ಯಮನ್‌ಕಲ್ಯಾಣಿ - ಅಷ್ಟ**
ಅಕ್ಕ ಕೇಳಿದೆಯೇನೆ ಹೊಸ ಸುದ್ದಿ | ದಿವ |
ದೊಕ್ಕಲಿಗಾದುದು ಬಹುವೃದ್ಧಿ || ಪ ||
ಕುದುರೆಯುಚ್ಚೈಃಶ್ರವ ಪೆಸರಂತೆ | ಇಂದು |
ತ್ರಿದಶರ ಪುರಕಾಗಮಿಪುದಂತೆ ||
ಹದಿನಾಲ್ಕು ಲೋಕವಚ್ಚರಿಗೊಂಡು | ಬಂದು |
ದದಕಾಗಿ ಪೋಗುವ ನಾವಿಂದು || ಅಕ್ಕ || 1 || 11 ||

**ಕೇದಾರಗೌಳ - ಅಷ್ಟ**
ವಿನತೆ ಕೇಳ್ ಪೋಗುವ ಘನಸೌಂದರ್ಯದ ವಾಜಿ |
ಎನುವುದಾನರಿತಿಹೆನೆ ||
ಮನವು ಸಂಶಯವೆಂಬುದನು ಬಲ್ಲರೆಲ್ಲವ |
ರನುವ ನಿರ್ಧರಿಸಿ ಪೇಳೆ || 1 || 12 ||

**ತೋಡಿ - ಅಷ್ಟ**
ಏನು ಸಂದೇಹ ಪೇಳೆ | ದಿವ್ಯಾಶ್ವವು |
ತಾನೈದುತಿರುವಾಗಲೆ ||
ಹಾನಿಗ್ಲಾನಿಗಳನು | ಮಾನ ಬರುವುದೇನೆಂ |
ದಾನರಿತರೆ ಪೇಳ್ವೆ | ನೇನೆಂದು ಪೇಳಕ್ಕ || 1 || 13 ||

**ಕೇದಾರಗೌಳ - ಅಷ್ಟ**
ತಂಗಿ ಕೇಳಾದರೆನ್ನಿಂಗಿತ ಬೇರಿಲ್ಲ |
ಮಂಗಲವಹ ಲಕ್ಷಣ ||
ಕಂಗೊಳಿಸಲ್ಕಾ ತುರಂಗದಂಗದ ನಿಜ |
ರಂಗನು ಪೇಳೆಂದಳು || 1 || 14 ||

**ತೋಡಿ - ಅಷ್ಟ**
ಬಿಳಿಯ ಬಣ್ಣದ ಕುದುರೆ | ಪೂರ್ಣಾಂಗದಿಂ |
ಪೊಳೆಯುತ್ತಲಿಹುದರರೆ ||
ತೊಳಗಿ ಬೆಳಗಿ ದೇವ | ನಿಲಯಕೈತರುತಿದೆ |
ತಳುವಬೇಡಕ್ಕ ನಾ | ವಲಸದೆ ಪೋಗುವ || 1 ||15 ||

**ಕೇದಾರಗೌಳ - ಅಷ್ಟ**
ಬಲ್ಲೆಯ ಬಾಲ ಕಪ್ಪಲ್ಲವೆ ತಿಳಿಯೆನೆಂ |
ದಲ್ಲಿ ಪೋಗುವುದಾವುದು ||
ಖುಲ್ಲೆ ಸುಳ್ಳಾಡುತೆನ್ನಲ್ಲಿ ವಾದಿಸುವುದು |
ಸಲ್ಲದು ನಿನಗೆಂದಳು || 1 || 16 ||

**ತೋಡಿ - ಅಷ್ಟ**
ಏನಕ್ಕ ನಿನ್ನೊಲವು | ಧಾವಲ್ಯದಿಂ |
ತಾನೊಪ್ಪುತಿಹ ಹಯವು ||
ನ್ಯೂನವಾಗುವುದೆಂತು | ನೀನೆಂದ ಹಸಿಸುಳ್ಳು |
ಗಾನೊಪ್ಪುವವಳಲ್ಲ | ಏನಾದರಾಗಲಿ || 1 ||17 ||

**ಸುರುಟಿ - ಏಕ**
ವಾದವೆಮ್ಮೊಳೇಕೆ | ನುಡಿಪುಸಿ |
ಯಾದರೆ ಬಾ ಪಣಕೆ ||
ಆದರಿಸುತ ಮತ್ಪಾದದ ಸೇವೆಯ |
ಗೈದಿರೆ ನೀನನು | ಮೋದಿಪೆಯೇಂ ಪೇಳೆ || 1 ||
ನಾ ಸೋತರೆ ನಿನಗೆ | ಅನುದಿನ |
ದಾಸಿಯ ಬಾಳೆನಗೆ ||
ಭಾಷಾಭಂಗದ | ದೋಷಕೆ ಸಿಲುಕದ |
ವಾಸಿಗೊಪ್ಪಿ ಕಾಂ | ಬಾಸೆಯೊಳಿರ್ದರು || 2 || 19 ||

**ಭಾಮಿನಿ**
ಗೆಲುವ ದಾರಿಯ ಕಾಣೆ ಸುಮ್ಮನೆ |
ಕುಳಿತರೇಂ ಗತಿ ವರ್ಣಸತ್ಯವ |
ತೊಳೆವ ತಂತ್ರವ ಗೆಯ್ಯದಿರೆ ಸುಖವಿಲ್ಲ ತನಗೆಂದು ||
ಬಳಿಗೆ ಮಕ್ಕಳನೆಲ್ಲ ಕರೆದೆಂ |
ದಳು ಸವತಿಸೇವೆಯನು ತಪ್ಪಿಸಿ |
ರಳುಕದಾಜ್ಞೆಯ ಪಾಲಿಸಿರಿ ನೀವೆನಲು ಬೆರಗಾಗಿ || 1 || 20 ||

**ಸಾಂಗತ್ಯ - ರೂಪಕ**
ಏನಾದುದಮ್ಮ ನಿನಗೆ ದಾಸ್ಯವೃತ್ತಿಯೆ |
ಮೌನೀಂದ್ರ ಕಶ್ಯಪನರಸಿ ||
ಮೇಣೀ ಬಿಲೌಕಸ ವಂಶದ ಜನನಿಗೀ |
ಗೇನಾಗಬೇಕವ್ವ ಪೇಳು || 1 ||
ಬಾಲಕರಿರ ಕೇಳಿರಿಂದ್ರನುಚ್ಚೈಃಶ್ರವ |
ಲೀಲೆಯೆಂ ಬರುವುದೀ ಪಥದಿ ||
ಬಾಲ ಕಪ್ಪೆಂದು ತಂಗಿಯಲಿ ಪಂಥವ ಗೈದೆ |
ಸೋಲಿನಿಂ ದಾಸ್ಯವಾಗುವುದು || 2 ||
ಮಾತೆ ನೀನರಿಯದಿಂತೇತಕೊರೆದೆ ಪೂರ್ಣ |
ಶ್ವೇತಾಶ್ವ ವೈಶಿಷ್ಟ್ಯವೆನುತ |
ಖ್ಯಾತವಾಗಿದೆ ನಿನ್ನ ರೀತಿ ನೀತಿಯ ಮೀರ |
ಲೀ ತನಯರೊಳೇನಾಗುವುದು || 3 ||
ತರಳರೆ ನಾನಿದನರಿತೇ ವಾದವ ಗೈದೆ |
ಗರಳ ಸೂಸುತ ನೀವು ಪೋಗಿ ||
ತುರಗದ ಬಾಲವನ್ನಡರಿ ಕಪ್ಪೆಂಬಂತೆ |
ವಿರಚಿಸಿರೆನ್ನಾಜ್ಞೆಯಂತೆ || 4 || 24 ||

**ಕೇದಾರಗೌಳ - ಝಂಪೆ**
ನೀತಿ ತಪ್ಪಿದ ಮಾತಿಗೆ | ತಲೆವಾಗೆ |
ಪ್ರೀತಿಯೇನೌ ರೀತಿಗೆ ||
ಪಾತಕದ ರಾಶಿ ಬೆಳೆದು | ನರಕ ಗತಿ |
ಓ ತಾಯೆ ವಂಶವಳಿದು || 1 || 25 ||

**ಮಾರವಿ - ಏಕ**
ಕದ್ರುವು ಪ್ರಳಯದ | ರುದ್ರನ ತೆರ ಕೋ |
ಪೋದ್ರೇಕದಿ ಕೆರಳಿ ||
ಎದ್ದೆಂದಳು ಮಾ | ತೃ ದ್ರೋಹಿಗಳಕ |
ಟಿದ್ದೇನ್ಫಲ ಬಾಳಿ || 1 ||
ಜನಮೇಜಯ ಕ್ರತು | ವನು ಗೈದಹಿಕುಲ |
ತನಯರನಧ್ವರಕೆ ||
ಅನಲಂಗಾಹುತಿ | ಯನು ಕೊಟ್ಟುರುಹಲಿ |
ಎನುತೈದಿದಳಾಕೆ || 2 || 27 ||

**ಭಾಮಿನಿ**
ವ್ಯಾಳವಂಶಕೆ ಬಂದ ಶಾಪವ |
ಕೇಳಿ ದ್ರುಹಿಣನು ನೆನೆದ ನಿಯತಿಯ |
ತಾಳಿ ತೋಷ ತಥಾಸ್ತುವೆನಲಾ ಪಾಕಶಾಸನನು ||
ತಾಳದಾಪತ್ತಹಿಕುಲದ ನಿ |
ರ್ಮೂಲ ಜೀವಸಮೇತ ಸುಡುವುದು |
ಲೀಲೆ ನಿನಗೇಂ ತೃಪ್ತಿ ಕಾರಣವರುಹಿರೆನಲೆಂದ || 1 || 28 ||

**ಜಂಜೂಟಿ - ಅಷ್ಟ**
ಪಾಕಶಾಸನ ಕೇಳು ಕಥೆಯ | ಮುಂದೆ |
ಕಾಕೋದರರು ಗೈವ ವ್ಯಥೆಯ |
ಭೀಕರವಹುದು ಸತ್ಕಾರ್ಯ ಗೈಯುವರಿಂಗೆ |
ಲೋಕಕಂಟಕರಾದ ದುರುಳ ಬಿ |
ಲೌಕಸರ ವಧೆ ಸರ್ವಮಂಗಲ || 1 ||

ಮುಂದೊಂದೇ ಪೆಸರ ಪೊಂದಿರುವ | ತಾಯಿ |
ತಂದೆಯರಿಂಗುದ್ಭವಿಸುವ |
ಕಂದ ವಸುಂಧರಾಮರನುತ್ತಮೋರಗ |
ವೃಂದವನ್ನುದ್ಧರಿಪನಳಿಯನು |
ದಂದಶೂಕಾನ್ವಯಕೆ ಬಿಡು ವ್ಯಥೆ || 2 || 30 ||

**ವಾರ್ಧಕ**
ಸುರಪನಂ ಸಂತೈಸಲಿತ್ತ ಭೋಗಿಗಳು ದು |
ಷ್ಪರಿಣಾಮ ಕೃತ್ಯದಿಂದಂಗಹೀನರು ದೇಹ |
ಪೊರೆಯುವುದು ಮೊದಲ ಕರ್ತವ್ಯ ಮಾತೆಯ ಮೆಚ್ಚಿಸುವ ವರವನೀವಳೆಂದು ||
ತುರಗಬಾಲಕೆ ಕೃಷ್ಣವರ್ಣದುರಗಗಳು ಮೆ |
ತ್ತಿರಲೈದಿತಶ್ವ ವಿನತೆಗೆ ಕದ್ರು ತೋರಿ ಕ |
ಣ್ಣರಳಿಸುತ ಪೇಳು ಪೇಳಾವ ಬಣ್ಣವಿದೆಂದು ಮೊಗನೆಗಹಿ ನೋಡೆಂದಳು || 1 || 31 ||

**ನೀಲಾಂಬರಿ - ರೂಪಕ (ಒಂದನೇ ರೀತಿ)**
ಅಕ್ಕ ಕಪ್ಪು ಸತ್ಯ ಕಪ್ಪೇ |
ತಕ್ಕಿ ಬಾಲ ಕಪ್ಪು ತಪ್ಪು |
ಸಕ್ಕರೆ ಕಹಿಯಾದೊಲಾಯ್ತು |
ದಿಕ್ಕುಗಾಣೆನು || 1 ||
ನಂಬಲಾಗದೆಂಬ ನುಡಿ ಪ |
ರಾಂಬರಿಸಬೇಕನ್ಯರೆಲ್ಲ |
ರೆಂಬುದನ್ನು ಪೇಳ್ದ ಕುರುಡಿ |
ನಂಬಲಿಲ್ಲವು || 2 ||
ತಂದೆ ತಾಯಿ ದೇವರಿರುವ |
ರೆಂದು ನಂಬಲೆಂತು ಜನಿಸಿ |
ದಂದು ತಿಳಿಯೆನೊರೆದ ಮಾತಿ |
ನಿಂದ ಮಣಿವೆನು || 3 ||
ಹೊತ್ತು ಹೋಗು ಮನೆಗೆ ಕಾಲ |
ನೊತ್ತು ನಿತ್ಯ ಸೇವೆ ಮಾಡೆ |
ನುತ್ತ ಪೆಗಲನೇರೆ ವಿನತೆ |
ಹೊತ್ತು ನಡೆದಳು || 4 || 35 ||

**ನೀಲಾಂಬರಿ - ರೂಪಕ (ಇನ್ನೊಂದು ರೀತಿ)**
ವಿನತೆಯು ಕದ್ರುವ ಸೇವಿಸು |
ತನುದಿನ ತಾಳದೆ ಬಳಲುತ |
ತನು ಕಂಪಿಸಿ ತಡೆಯದೆ ಕಂ |
ಬನಿ ಸುರಿಸುತ ಮರುಗಿ ||
ವಿನಯದಿ ವರ್ತಿಸಿದರು ಗ |
ರ್ಜನೆ ಕೈ ಬಾಯ್ಗಿಲ್ಲೆಣೆ ನಡೆ |
ಯನು ತಪ್ಪೆಂದುಸುರುವಳಕ |
ಟೆನಗೀ ಗತಿಯಾಯ್ತೆ || 1 ||
ಸತ್ಯವು ನೆಲೆನಿಲದಾಯಿತೆ |
ಮಿಥ್ಯವು ಜಯಯಶ ಪಡೆಯಿತೆ ||
ನಿತ್ಯವು ಸತ್ಯವೊ ಮಿಥ್ಯವೊ |
ಕೃತ್ಯವಿದೇನಕಟಾ ||
ಮೃತ್ಯುವಿಗಿಮ್ಮಡಿ ಗೈವಳ |
ಪಥ್ಯದ ಕೆಲಸವ ನಿಯಮಿಸಿ |
ನೃತ್ಯವ ಗೈಸುತ್ತಿಹಳೀ |
ತಥ್ಯ ಸಹಿಸಲಾರೆ || 2 || 37 ||

**ಕಂದ**
ಬಂದಬ್ಬರಿಸುತ ಕದ್ರುವು |
ಪಂದ್ಯದಿ ನಾ ಸೋಲಲೆಂತು ಗೈಸದಿರುವೆಯೇಂ ||
ಸಂದುದೆ ಮಾನವು ಹಿರಿಯ |
ಳ್ಗೆಂದರಿಯದ ತಂಗಿ ನೃತ್ಯಗೈಯೆನೆ ಕುಣಿದಳ್ || 1 || 38 ||

***ಗರುಡೋದ್ಭವ:***

**ಸೌರಾಷ್ಟ್ರ - ತ್ರಿವುಡೆ**

ಬಿರಿದುದೋ ಬ್ರಹ್ಮಾಂಡಗರ್ಭವು |
ಜರಿದುವೋ ಕುಲಗಿರಿಗಳೆಂಬೋಲ್ |
ಹರಿದುದಂಡವ ಪಕ್ಷಿಶಿಶು ಮೂ | ಧರೆಯು ನಡುಗೆ || 1 ||
ಗರಿಗೆದರಿಯುರಿಮಸಗುತಲಿ ಪ್ರತಿ |
ಗಿರಿಯವೋಲದು ಬೆಳೆದು ಹಸಿವಿಂ |
ಮೊರೆವುತಗ್ನಿಯ ಸೂಸೆ ಬೆದರಿದು | ದರರೆ ಲೋಕ || 2 || 40 ||

**ವಾರ್ಧಕ**

ಸುಡುವುದೀ ಪಕ್ಷಿ ಸೃಷ್ಟಿಯನೆಂದು ಮೂಜಗಂ |
ನಡುಗೆ ನುತಿಸಿದನಗ್ನಿ ತಣ್ಣಗಾಗೆಂದವನ |
ಬಿಡುಗಣ್ಣರೊಡೆಯ ಕಂಗೆಡುತಿರಲ್ಕಣುಗನೆಡೆಗೈತಂದ ಮುನಿ ಕಶ್ಯಪಂ ||
ಗುಡುಗುಡಿಸಿ ಬಾಯ್ಕಳೆದು ನುಂಗಲೆಂದೈತರಲ್ |
ಒಡನೆ ಮಂತ್ರೋದಕವನಿಕ್ಕಲಡಗಿತು ಹಸಿವು |
ತಡವರಿಸೆ ಸುಜ್ಞಾನನಿಧಿಯಾಗುತಯ್ಯನೆಂದಡಿಗೆರಗಿ ನುತಿಸಲೆತ್ತಿ || 1 || 41 ||

**ಶಂಕರಾಭರಣ - ತ್ರಿವುಡೆ (ಪ್ರಭೇದ)**

ಮಗನೆ ಬೆಳಗಲು ಖಗಕುಲವ ನೀ |
ನೊಗೆದೆ ಲೋಕದಿ ಪೆಸರು ಗರುಡನು ||
ಜಗವ ಝಂಕಿಸಬೇಡ ಮಾತೆಯ |
ದುಗುಡ ನೀಗೈ ದಾಸ್ಯದಿಂ || ತೊಳಲುತಿಹಳು || 1 ||
ಮಾತೆಗೇತಕೆ ದಾಸ್ಯ ಹುಟ್ಟಿನ |
ರೀತಿಯರುಹಿರಿ ಮುಂದಕೆನಗಿ |
ನ್ನೇತರದ ಕರ್ತವ್ಯವೆಂಬುದ |
ತಾತ ಬೆಸಸಿರಿ ಜನನಿಯು || ಇರುವಳೆಲ್ಲಿ || 2 ||
ಅರುಣನಗ್ರಜನಂಗಹೀನನ |
ನಿರಿಸಿ ರವಿರಥ ಸಾರಥಿತ್ವಕೆ |
ತೆರಳು ಜನನಿಯ ಬಳಿಗೆಯೊರೆವಳು |
ಉರಗದ್ವೀಪದೊಳಿರ್ಪಳು || ವಿನತೆದೇವಿ || 3 || 44 ||

**ಭಾಮಿನಿ**

ಕಂದ ಜಯಮಂ ಪೊಂದೆನುತ್ತಲಿ |
ತಂದೆ ಪರಸಲು ವಂದಿಸುತ್ತಾ |
ನಂದದಿಂ ತಾ ರೆಕ್ಕೆ ಬೀಸುತ ನೆಗೆದನಂಬರಕೆ ||
ಸಂಧಿಸುತ ರವಿರಥದೊಳರುಣನ |
ಕುಂದಿನಂದವನರಿಯುತಲ್ಲಿಂ |
ಬಂದು ಮಾತೆಯೆ ಪರಸೆನುತ ನಮಿಸಿದನನೀಕ್ಷಿಸುತ || 1 || 45 ||

**ಸುರುಟಿ - ಏಕ**

ಮುದ್ದಾಡಿದಳವನ | ತೋಷದೊ |
ಳದ್ದಿ ವಿನತೆ ಮಗನ ||
ಉದ್ಧರಿಸದೆ ನಾ | ಬಿದ್ದೆನು ದಾಸ್ಯದೊ |
ಳಿದ್ದೈ ಬೆಳೆಯುತ | ಮುದ್ದುಕುಮಾರನೆ || 1 ||
ತಂದೆಗೆಂಟು ಜನರು | ಮಾತೆಯ |
ರೊಂದೆ ಸ್ಥಾನದವರು ||
ಕುಂದು-ನಿಂದೆಗಳು | ಬಂಧು-ಬಳಗಕಿಹು |
ದಂದವಲ್ಲವೀ | ಬಂಧನ ಬಿಡಿಸುವೆ || 2 ||
ಪಂದ್ಯ ಬಣ್ಣ ಬಯಲು | ಆದುದ |
ರಿಂದ ಬಂತು ಸೋಲು ||
ಬಂಧಮೋಕ್ಷಕೇ | ನೆಂದಕ್ಕನ ಕೇ |
ಳೆಂದೆನೆ ಕದ್ರುವ | ನೊಂದಿಸುತೆಂದನು || 3 || 48 ||

**ನವರೋಜು - ಆದಿ || ಭೈರವಿ - ಏಕ (ಸಮೀಕೃತ ಬಂಧ)**
ಮಾತೆಯ ನೀ ಬಿಡು ದೇವಿ | ನಿನ್ನ |
ಮಾತನು ಪಾಲಿಪೆನೋವಿ ||
ಜಾತನು ಕೌತುಕವೇನು | ಕಾ |
ರ್ಯಾತುರನಾಗಿಹೆ ನಾನು || 1 || 49 ||

**ಮಧ್ಯಮಾವತಿ - ಆದಿ || ತುಜಾವಂತು - ಝಂಪೆ (ಸಮೀಕೃತ ಬಂಧ)**
ತರಳರೆಲ್ಲವರೊಂದೆ ಪಂಥದಿಂದಿವಳು |
ಸೆರೆಯಾದಳಮೃತ ತಂದೀವೆಯೇಂ ಪೇಳು ||
ಉರಗರಿಂಗಪಮೃತ್ಯು ಮರಣ ತಪ್ಪುವುದು |
ಗರುಡ ನಿನ್ನಮೃಗಾ ದಿನ ಮೋಕ್ಷವಹುದು || 1 || 50 ||

**ಕಂದ || ಕೇದಾರಗೌಳ - ಅಷ್ಟ (ಸಮೀಕೃತ ಬಂಧ)**
ಅಮೃಂಗಾದೀ ದಾಸ್ಯಂ | ಒಮ್ಮೆಗೆ ನೀಗಲ್ಕೆ |
ನೆಮ್ಮದಿಯಹುದು ನಿತ್ಯಂ |
ನಿಮ್ಮಾಜ್ಞಾಧಾರಂ ದೊ | ಡ್ಡಮ್ಮ ಪರಸಿರೆಂದು |
ಧಿಮ್ಮನೆದ್ದನು ಗರುಡಂ || 1 || 51 ||

**ಸೌರಾಷ್ಟ್ರ - ತ್ರಿವುಡೆ**
ಎದ್ದ ರಭಸಕೆ ಪೊಡವಿ ಕಂಪಿಸ |
ಲದ್ಭುತಾಕೃತಿ ಪೊಂದಿ ನೆಗೆದನು |
ಕಾದ್ರವೇಯರು ಪಕ್ಷವಾತದೊ | ಳೆದ್ದು ಬೀಳೆ || 1 ||
ಮತ್ತೆ ಕೆಣಕಿತು ಹಸಿವು ಕಶ್ಯಪ |
ನಿತ್ತ ಸಲಹೆಯಲಿಳಿದು ಸರಸಿಗೆ |
ಮತ್ತವಾರಣ ಕಚ್ಛಪಂಗಳ | ಪೊತ್ತು ನೆಗೆದ || 2 ||
ಗಿರಿಯ ಗಾತ್ರದ ಕರಿಯನಾಮೆಯ |
ನೆರಡು ಪಾದದೊಳೆತ್ತಿ ಯೋಜನ |
ಹರಡಿ ನಿಂದಶ್ವತ್ಥಶಾಖೆಯೊ | ಳಿರಿಸೆ ಮುರಿಯೆ || 3 || 54 ||

**ಭೈರವಿ - ಝಂಪೆ**
ನೇಲುತ್ತ ತಪದೊಳಿಹ ವಾಲಖಿಲ್ಯರ ಕಂಡು |
ಬೀಳದಂತೆತ್ತಿ ಶಾಖೆಯನು ||
ಮೇಲೆ ಚಿಮ್ಮಿದ ಚಂಚುವಿಂದೊತ್ತಿ ಪಾರಲೇ |
ರೇಳು ಲೋಕವು 'ಗರುಡ'ನೆನಲು || 1 ||
ಕಶ್ಯಪಂ ಬೇಡಲ್ಕದೃಶ್ಯರಾಗಲಿಕಾ ಖ |
ಗೇಶ್ವರನು ಹಿಮಗಿರಿಯೊಳಿಟ್ಟು ||
ಪುಷ್ಕಲಂ ತಿಂದು ಹಿಂಗಿಸಿ ಹಸಿವ ಹೊರವಂಟ |
ಪುಷ್ಕರವನೇರಿ ದಿವದತ್ತ || 2 || 56 ||

**ಸೌರಾಷ್ಟ್ರ - ತ್ರಿವುಡೆ**
ಗಡಿಯ ಬಡಿಗೆಯ ಭಟರು ತಡೆಯಲು |
ಬಿಡಿರಮೃತ ತಹೆನೆನಲು ಹಕ್ಕಿಯ |
ಹೊಡೆಯೆ ಪರಚಲು ನಡುಗುತೋಡಿದ | ರೊಡೆಯನೆಡೆಗೆ || 1 || 57 ||

**ಮುಖಾರಿ - ಏಕ**
ತ್ರಿದಿವೇಶ ದೇವ ಬಹು ಪರಾಕು |
ನಮಗೀ ಕಷ್ಟದ ಕೆಲಸವೆ ಸಾಕು ||
ಮದವಡರಿ ಪರಚಿತೀಕ್ಷಿಸಬೇಕು || ತ್ರಿದಿವೇಶ ||
ಕೆದರುತ ಗರಿಯ | ನ್ನೊದರುವ ಪಕ್ಷಿಯು |
ಬೆದರಿಸಿದರೆ ಕಸಿ | ದುದು ನಮ್ಮಾಯುಧ |
ಸುಧೆ ಬೇಕೆನ್ನುತ | ಲೊದೆದಟ್ಟಿದುದ್ಯೆ || ತ್ರಿದಿವೇಶ || 1 || 58 ||

**ಸೌರಾಷ್ಟ್ರ - ತ್ರಿವುಡೆ**
ಚರರಿಗಭಯನಿತ್ತು ಯಕ್ಷರ |
ಕರೆಸಲಶ್ವಕ್ರುಂದ ರೇಣುಕ |
ಪುರುಜತಪನ ನಿಮೇಷಶ್ವಸನಾ | ದ್ಯರನು ಕೂಡಿ || 1 ||

ಬಂದುಲೂಕನು ಕೃಥನರೆರಗೆ ಪು |
ರಂದರನು ಸುಧೆಗಳ್ಳ ಗರುಡನ |
ಪಿಂದಕಟ್ಟಿರೆನಲ್ಕೆ ವಂದಿಸಿ | ಬಂದು ತಡೆಯೆ || 2 || 60 ||

**ಕೇದಾರಗೌಳ - ಝಂಪೆ**
ಘೋರರೂಪದ ಕೃಥನನು | ತಡೆದೆಂದ |
ನಾರೊ ಕ್ಷಮೆಬೇಡಿ ನೀನು ||
ಊರುಮನೆ ಸೇರು ಸುಖದಿ | ಬಂದಂತೆ |
ಮೀರಿದರೆ ಕೊಲುವೆ ರಣದಿ || 1 ||
ಬೇಕಮೃತವೆನಗಿತ್ತರೆ | ಮತ್ತೇನ |
ನೂ ಕೇಳೆನೆಂಬುದು ಖರೆ ||
ಕಾಕೋದರರಿಗೀವೆನು | ಜನನಿಗೆಂ |
ದೀ ಕೆಲಸ ಗೈಯ್ಯುತಿಹೆನು || 2 ||
ಹಕ್ಕಿಹುಳು ಹಾವುಗಳಿಗೆ | ಸುಧೆ ನೋಡ |
ಲಿಕ್ಕರ್ಹವಲ್ಲ ಗಳಿಗೆ ||
ಸೊಕ್ಕ ನಿಲಿಸುವೆನೆಂದನು | ಅಂಡಜನು |
ಪಕ್ಕದಿಂದೊರಗಿಸಿದನು || 3 || 63 ||

**ಘಂಟಾರವ - ಅಷ್ಟ**
ಕಂಡುಲೂಽಕ ಕೋ | ದಂಡಕೇರಿಸಿ ಬಾಣ |
ಅಂಡಜಗೆ ಬಿಡೆ | ಕಂಡು ತುಂಡದಿ |
ಖಂಡಿಸುತ್ತಿಂತೆಂದನು || 1 ||
ಬೇಡ ಸಾಹಸ | ನೋಡು ಬಿದ್ದವನನ್ನು |
ಕೇಡ ಬಯಸುವ | ಮೂಢನಾಗದಿ |
ರೋಡು ಯಕ್ಷನೆ ಸುಮ್ಮನೆ || 2 ||
ಅಂಗವಿಲ್ಲ ವಿ | ಹಂಗಮ ನಿನಗಾನು |
ಹಿಂಗುವೆನೆ ಸಂಗರಕೆ ಬಾಣದಿ |
ಭಂಗಿಸುವೆನೆಂದೆಚ್ಚನು || 3 || 66 ||

**ಮಾರವಿ - ಏಕ**
ಶರ ಕಡಿದೊರಗಿಸೆ | ಪ್ರರುಜನು ತಡೆಯಲು |
ಗರುಡ ಕೆಡಹಲೊದ್ದ ||
ಬರಲು ನಿಮೇಷನ | ನೊರಗಿಸಿ ಶ್ವಸನನ |
ತಿರುಗಿಸಿ ಬಿಡೆ ಹದ್ದ || 1 ||
ಕಾಣುತ ಕೋಪದಿ | ರೇಣುಕ ಗರುಡನು |
ಕಾಣದ ರೀತಿಯಲಿ |
ಬಾಣಾಘಾತದಿ | ಪ್ರಾಣವ ತೆಗೆಯುವೆ |
ಪ್ರಾಣಿಯೆ ನಿಲ್ಲಲ್ಲಿ || 2 ||
ಒದ್ದನು ಗರುಡನು | ಯುದ್ಧದಿ ರೇಣುಕ |
ಬಿದ್ದನು ಮೂರ್ಛೆಯಲಿ ||
ಸಿದ್ಧರ ಸಾಧ್ಯರ | ಗೆದ್ದುದಕೆಂದನು |
ವೃದ್ಧಶ್ರುವಕನಲಿ || 3 || 69 ||

**ತುಜಾವಂತು - ಮಟ್ಟೆ**
ಬರವಿದೇನು ವೈನತೇಯನೆ |
ಯಕ್ಷ ಪಡೆಯ ಗೆಲಿದೆ ಭಲರೆ |
ಬರಿದೆ ಹಿಂಸೆ ಗೈವ ಶೂರನೆ ||
ಸುರಪ ಮೂರು ಲೋಕಪಾಲಕ | ನೂರು ಯಾಗ |
ವಿರಚಿಸುತ್ತ ಪಡೆದ ಸಾಧಕ ||
ಶರಧಿ ಮಥಿಸೆ ಕಷ್ಟದಿಂದ |
ದೊರೆತ ವಸ್ತುಗಳನು ಕೊಟ್ಟ |
ಹರಿಯು ಪೊರೆವನೆಂಬ ನಿಜವ |
ನರಿಯದಾದೆ ಬಂದು ಸ್ವರ್ಗವ | ಆಕ್ರಮಿಸಿದೆ |
ದುರುಳರಂತೆ ತಿಳಿಯೆ ಗೌರವ || ಬರವಿದೇನು || 1 ||

ಬಂದುದಲ್ಲ ವೈರ ಸಾಧಿಸೆ |
ತಾಯು ದಾಸ್ಯದಿಂದ ಮುಕ್ತಿ ಕಾರ್ಯ ಯಾಚಿಸೆ ||
ಕಂದರಿಂಗೆ ಸೊದೆಯ ಕದ್ರು |
ತಂದು ಕೊಡಲು ಪೇಳಲೊಪ್ಪಿ |
ಬಂದೆ ಖಲರ ವೃತ್ತಿಯಲ್ಲ |
ಒಂದೆ ಮನವು ಕಮಲ ಸಂಭವ | ಹರಿಹರಾದ್ಯರ್ |
ಬಂದು ತಡೆಯೆ ಬಿಡೆ ಕೊಡಮೃತವ || ಬಂದುದಲ್ಲ || 2 || 71 ||

*(ಯುದ್ಧ)*

**ಭಾಮಿನಿ**
ಪರಿ ಪರಿಯ ಮಂತ್ರಾಸ್ತ್ರಗಳ ಬಿಡೆ |
ತರಿಯೆ ವಜ್ರದಿ ಪೊಡೆಯೆ ಕಸಿಯುತ |
ಗರಿಯನಶನಿಯ ಗೌರವಕ್ಕುದುರಿಸುತ ಗರ್ಜಿಸಲು ||
ಸುರಪ ಮುಂದೇಂ ಗೆಯ್ಯಲರಿಯದೆ |
ಹರಿಯೆ ಲಕ್ಷ್ಮೀವರನೆ ರಕ್ಷಿಸು |
ಗರುಡನೊಳು ನಾ ಸೋತೆನೆನ್ನುತ ನುತಿಸೆ ಮೆಯ್ವೋರ್ದ || 1 || 72 ||

**ನವರೋಜು - ಏಕ**
ಏಕಿದು ನಾಕದಿ ಶೋಕ | ಭೂ |
ಲೋಕದ ಕರ್ಮವಿಪಾಕ ||
ಆ ಕುಜ ಹಯ ಮ | ತ್ತಾ ಕರಿ ಧೇನುವು |
ನಾ ಕೊಟ್ಟೆನು ಸುಧೆ | ವ್ಯಾಕುಲವಳಿಯಲು || 1 ||
ಉತ್ತಮವಾಗಿರೆ ನೋಡಿ | ಕೈ |
ಎತ್ತುವರಾಹವ ಮಾಡಿ ||
ಮತ್ತನು ವಿನತಾ | ಪುತ್ರನಮೃತವನು |
ಹೊತ್ತು ಪೋಪ ಪುರು | ಷೋತ್ತಮ ವೀಕ್ಷಿಸು || 2 ||
ಗರುಡನೆ ಗೈದಾಟೋಪ | ಈ |
ಹರಿಹಯಗಾದುದು ತಾಪ ||
ದುರುಳರು ವಿಷದಂ | ಷ್ಟ್ರರಿಗಮೃತವ ಕೊಡ |
ದಿರು ನೀ ಕೇಳಿದ | ವರವೀಯುವೆ ನಾ || 3 || 75 ||

**ಬೇಗಡೆ - ಏಕ**
ಮಾತೃ ದಾಸ್ಯ ವಿಮೋಚನೆಗೆ ಸುಧೆಯ | ಕೊಂಡೊಯ್ವೆ ಸಿಕ್ಕದ |
ರೀತಿ ಹೇಗೀಗೆಂದದರ ವಿಧಿಯ ||
ನೀ ತಿಳುಹು ಸರ್ವೋತ್ತಮನೆ ವರ |
ದಾತ ನಿನ್ನಿಂದುನ್ನತಸ್ಥಾ |
ನಾ ತಿಥಿಯು ಕೊಡು ಕೇಳು ನಿನ್ನಯ |
ಮಾತ ನಡೆಸುವೆನೆನಲು ಕೇಳಿದ || 1 ||
ಗರುಡವಾಹನನಾಗಬೇಕೆನಗೆ | ಎನ್ನಿಂದ ಮೇಲಾ |
ಗಿರುವ ಧ್ವಜದಲ್ಲಿರು ಮಹೋನ್ನತಿಗೆ ||
ಇರಿಸು ದರ್ಭಾಸನದಿ ಕಲಶವ |
ನೊರೆದು ಬಿಡಿಸವ್ವೆಯನು ಮಜ್ಜನ |
ವಿರಚಿಸುತ ಶುಚಿಯಿಂದ ಸುಧೆ ಸ್ವೀ |
ಕರಿಸಿರೆನಲೈದುವರು ಸ್ನಾನಕೆ || 2 ||
ಜಂಭಭೇದಿಯೆ ಪೋಗದೃಶ್ಯದಲಿ | ಪನ್ನಗರು ಮಜ್ಜನ |
ಸಂಭ್ರಮದಿ ಪೂರೈಸುವಷ್ಟರಲಿ ||
ಅಂಬರಕೆ ಸುಳಿಗಾಳಿಯುಕ್ಕಿಸಿ |
ಕುಂಭವನು ಹಾರಿಸುತ ತಂದಿಡು |
ನಂಬಿದರಿಗಿಷ್ಟಾರ್ಥವೀಯುವೆ |
ನೆಂಬ ನುಡಿ ಪುಸಿಯಲ್ಲ ಸಾಧಿಸು || 3 || 78 ||

**ಮಧುಮಾಧವಿ - ತ್ರಿವುಡೆ**
ಗರುಡವಾಹನನಾಗಿ ಧ್ವಜದ |
ಲ್ಲಿರಿಸಿ ನೋಡುತ ಪೂರ್ಣ ಹರಿಯಾ |
ಗಿರುವೆನೆಲೆ ಖಗಮೌಳಿ ಪರಮಾ |
ದರನು ಮುಂದಿನ ಕಾರ್ಯಕೆ || 1 ||

ಖಗಕುಲೇಶ್ವರ ಪಟ್ಟವೀಯುತ |
ಮಘವ ವಿಧ್ಯುಕ್ತದಲಿ ಪೇಳಿದ |
ತೆಗೆದುಕೋ ಸುಧೆ ಶಕ್ತಿಯಿಂ ನೀ |
ಬಗೆದು ರಕ್ಷಾವ್ಯೂಹವ || 2 || 80 ||

**ಪಂತುವರಾಳಿ - ಮಟ್ಟೆ**
ಗರುಡನೆರಗುತ್ತೈದಿ ಕಂಡನಮೃತ ಕಲಶವ |
ಉರಿವ ಬೆಂಕಿಗಿಕ್ಕಿ ನೀರ ತಿರುಗುವಾರವ |
ಮುರಿದು ಕಾಯ್ವ ಸರ್ಪಗಳನು ತುಳಿವುತೆತ್ತಿದ |
ಸುರೆಯ ಕೊಡವ ಪೊತ್ತು ತೋಷಗೊಳುತ ಗಮಿಸಿದ || 1 ||
ನಾಗಪಟ್ಟಣದೊಳು ಕದ್ರು ವಿನತೆಯಿಂದಲಿ |
ಭೋಗಿನಿವಹ ತನ್ನ ಸೇವೆ ಮಾಡಿಸುತ್ತಲಿ |
ಯೋಗಕುಬ್ಬುತಿರಲು ತಾರ್ಕ್ಷ್ಯನಮೃತ ತಂದನು |
ಬಾಗುತವ್ವೆಗೀಗ ದಾಸ್ಯ ತೀರಿತೆಂದನು || 2 ||
ಹಿಂಡು ಮಕ್ಕಳೊಡನೆ ಬಂದು ಸುಧೆಯ ಪಾತ್ರೆಯ |
ಕಂಡು ವಿನತೆ ಪೋಗು ಗೈದೆ ದಾಸ್ಯಮುಕ್ತಿಯ ||
ಚಂಡವೀರ ನಿನ್ನ ಶಕ್ತಿಯಿಂದ ತನಯರು |
ಕುಂಡದುರಿಗೆ ಬೀಳಲೇನು ಸಾಯದುಳಿವರು || 3 || 83 ||

**ಸೌರಾಷ್ಟ್ರ - ಅಷ್ಟ**
ವಿನತಾನಂದನನಾದೆ ಜನನಿಯ ಮೋಕ್ಷದಿಂ | ದಮ್ಮ ಕೇಳು || ಮಾತೆ |
ಯನು ಕರೆದೊಯ್ಯುವೆ ನಾಗಪಟ್ಟಣದಿಂ ದೊ | ಡ್ಡಮ್ಮ ಕೇಳು || 1 ||
ಶರಧಿಮಥನ ಗೈದವರಿಗೆಲ್ಲ ಸಿಗಲಿಲ್ಲ | ಕದ್ರು ದೇವಿ || ದೋಷ |
ವಿರಲು ದಕ್ಕದು ಶುದ್ಧಭಾವದಿಂ ಬಳಸಿರಿ | ಕದ್ರು ದೇವಿ || 2 ||
ಮಣ್ಣ ಮುಟ್ಟಲು ಬಾರದದಕಾಗಿ ಕುಶದ ಮೇ | ಲಿಟ್ಟೆನಮ್ಮ | ನಿಮ್ಮ |
ಚಿಣ್ಣರೆಲ್ಲರು ಮಿಂದು ಕುಡಿಯಲಮೃತವನ್ನು | ಬರ್ಪೆವಮ್ಮ|| 3 || 86 ||

**ಸೌರಾಷ್ಟ್ರ - ತ್ರಿವುಡೆ**
ಗರುಡ ವಿನತೆಯರೆರಗೆ ಕದ್ರುವು |
ಹರುಷದಿಂದುಪಚರಿಸಿ ಕಳುಹಲು |
ಉರಗರೆಲ್ಲರು ನದಿಯ ಸ್ನಾನಕೆ | ತೆರಳಲಿತ್ತ || 1 ||
ಸುತ್ತಿ ಸುಂಟರಗಾಳಿ ನೆಲದಿಂ |
ದೆತ್ತಿ ಕಲಶವನೊಯ್ಯೆ ಬಂದಾ |
ಪತ್ತರಿತು ಹಡೆಬಿಚ್ಚಿ ಕುಶವ | ನ್ನೆತ್ತಿ ಬಡಿಯೆ || 2 ||
ಖಿನ್ನರಾಗುತ ಕುಶವ ನೆಕ್ಕಲು |
ಪನ್ನಗರ ನಾಲಗೆಯು ಸೀಳಿತು |
ತನ್ನ ಭಾಗ್ಯವ ಹಳಿದು ಕದ್ರುವು | ಬನ್ನಪಡಲು || 3 || 89 ||

**ಕಂದ**
ಸುಳ್ಳಿಂ ಸತ್ಯವನಾಗಿಸೆ |
ಕ್ಷುಲ್ಲಕಕಾರ್ಯವನೆ ಗೆಯ್ಯೆ ಕದ್ರುವು ಕಪಟಂ ||
ನಿಲ್ಲದೆ ತಾನನುಭವಿಸುವ |
ಳಲ್ಲಿದು ಬೆರಗೆನಿಕುಮಾತೆ ಜನಿಪಳಿ ಜಗದೊಳ್ || 1 || 90 ||

**ಭಾಮಿನಿ**
ಗರುಡ ಮಾತೆಯ ಕೂಡಿಕೊಂಡೈ |
ತರುತ ತಂದೆಗೆ ಮಣಿದು ಸುದ್ದಿಯ |
ನೊರೆಯೆ ಮೆಚ್ಚಿದೆ ಮಗನೆ ಹರಿರಥನಾದೆ ಭಾಗ್ಯವಿದು ||
ಪರಸಿದಂ ಶಿವಶುಭ್ರ ಸುಂದರ |
ಚರಿತನಾಗೆನೆ ಬೀಳುಗೊಳ್ಳುತ |
ಪೊರಟ ಹರಿಯಂ ನೆನೆದು ಶ್ರೀವೈಕುಂಠದೆತ್ತರಕೆ || 1 || 91 ||

**ಮೋಹನ - ಆದಿ**
ಅಂಬಾ | ಪಾಲಿಸು ಕರುಣದಿ ದುರ್ಗಾಂಬಾ |
ಜಯ ಭ್ರಮರಾಂಬಾ || ಅಂಬಾ ||
ಶಂಭುಮನೋಜ್ಞೆಯೆ | ತ್ರ್ಯಂಬಕೆ ಗೌರಿ ಮೂ |
ಕಾಂಬಿಕೆ ಶುಂಭ ನಿ | ಶುಂಭವಿದಾರಿಣಿ || ಅಂಬಾ || ಪ ||

ಮುನಿಯಾ | ಶಾ |
ಪವ ಧರಿಸುತಲೀ ಭುವಿಯಾಽ | ತಾ |
ಪವ ಹರಿಸಿದ ನಂದಿನಿಯಾಽ | ಸಂ |
ಭವೆಯಾಗುತಲೊಡೆದರೆಯಾಽ ||
ದಿವಿಜರಿಗಿತ್ತಭ | ಯವನರುಣಾಸುರ |
ನವಸಾನಕೆ ಭ್ರಾಮರಿ ರೂಪಾಂತೆಯ || ಅಂಬಾ || 1 || 92 ||

*ಮಂಗಲ :*

**ಸಾಂಗತ್ಯ - ರೂಪಕ || ಅಷ್ಟ - ಝಂಪೆ - ಏಕ |**
ಪ್ರಣವಸ್ವರೂಪಂಗೆ | ಗಣನಾಥತಾತಂಗೆ |
ವನಧಿಜಾತೆಯ ನಾಥ ಹರಿಗೆ ||
ವಿನುತ ವಾಣೀಶಂಗೆ ಅನಿಮಿಷಾದಿಗಳಿಂಗೆ |
ಮನದ ಮಂಗಲ ಯಕ್ಷಕಲೆಗೆ || 1 ||
ನಂದಿನೀತಟದಲ್ಲಿ ನಿಂದು ಲೋಕವ ಕಾಯ |
ಲೆಂದುದ್ಭವಿಸಿದ ಭ್ರಾಮರಿಗೆ ||
ಕೊಂದು ದೈತ್ಯರ ಭಕ್ತವೃಂದೋದ್ಧರಣಗೈಯ್ಯು |
ತಿಂದುಕಾಂತಿಯೊಳೊಪ್ಪುವಳಿಗೆ || 2 || 94 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಉಡುಪಿ ಯಕ್ಷಗಾನ ಕೇಂದ್ರ

**ಪ್ರಸಂಗ ಪ್ರತಿ ಆಧಾರ:** ಉಡುಪಿ ಯಕ್ಷಗಾನ ಕೇಂದ್ರ ಪ್ರಕಟಿತ ಯಕ್ಷಗಾನ ಪ್ರಸಂಗ ಮಾಲಿಕಾ

**ಪ್ರಸಂಗ ಪ್ರತಿ ಕೊಟ್ಟವರು:** ಶ್ರೀನಿಧಿ ಡಿ. ಎಸ್.

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಶ್ರೀನಿಧಿ ಡಿ. ಎಸ್.

**ಅಂತರಜಾಲ ಪ್ರತಿ ಬರವಣಿಗೆ:** ಶ್ರೀನಿಧಿ ಡಿ. ಎಸ್.

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ